**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**
**ಸಿಸಿ ನಂಬರ : 1057/2021**

| | | | |
|---|---|---|---|
| ಸಾಕ್ಷಿಯ ಹೆಸರು | : ಪುಟ್ಟಮ್ಮ | ಸಿ.ಡಬ್ಲ್ಯು | 1 |
| ತಂದೆಯ ಹೆಸರು | : ಶಿವಪ್ಪ | ಪಿ.ಡಬ್ಲ್ಯು | 1 |
| ವಯಸ್ಸು | : 48 ವರ್ಷ | | |
| ಉದ್ಯೋಗ | : ಮನೆ ಕೆಲಸ | | |
| ವಾಸ ಸ್ಥಳ | : ಬೀರೂರು | | |

**ದಿನಾಂಕ: 26-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-**

ನನಗೆ ಚಾಸಾ-2, 4 ರಿಂದ 10 ರವರ ಮುಖ ಪರಿಚಯ ಇದೆ. ಈಗ ಎರಡು ವರ್ಷಗಳ ಹಿಂದೆ ಭಾನುವಾರದಂದು ನನ್ನ ಗಂಡ ರಸ್ತೆ ಅಪಘಾತದಲ್ಲಿ ತೀರಿಕೊಂಡಿದ್ದಾರೆ. ಮೃತ ನನ್ನ ಗಂಡ ಚಾಸಾ-2 ರವರೊಂದಿಗೆ ಲಾರಿಯಿಂದ ಗೊಬ್ಬರದ ಚೀಲಗಳನ್ನು ಇಳಿಸುವ ಕಾಲಕ್ಕೆ ಅಪಘಾತವಾಗಿ ತೀರಿಕೊಂಡಿದ್ದಾರೆ ಎಂದು ನನ್ನ ಮಗಳು ಹೇಳಿದ್ದಾಳೆ. ನಾನು ತರೀಕೆರೆ ಸರ್ಕಾರಿ ಆಸ್ಪತ್ರೆಗೆ ಹೋದಾಗ ನನ್ನ ಗಂಡ ಆಗಲೇ ಮೃತನಾಗಿದ್ದರು. ಅಪಘಾತ ಹೇಗೆ, ಯಾವ, ರೀತಿ ಆಗಿದೆ , ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ನನ್ನನ್ನು ಈ ಬಗ್ಗೆ ಯಾರೂ ವಿಚಾರ ಮಾಡಿಲ್ಲ. ನನ್ನ ತಂಗಿಯ ಮಗ ಬರೆದು ಪಿರ್ಯಾದಿಗೆ ನಾನು ಸಹಿ ಹಾಕಿದ್ದೇನೆ. ದೂರನ್ನು ನಿಪಿ.1, ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ಅದರಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಕೇವಲ ಸಹಿ ಮಾತ್ರ ಹಾಕಿದ್ದೇನೆ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:-**

ದಿನಾಂಕ 13-03-2022 ರಂದು ಮೃತ ನನ್ನ ಗಂಡ ಮತ್ತು ಚಸಾ-2 ಆರೋಪಿಗೆ ಸೇರಿದ ಲಾರಿಯಿಂದ ಗೊಬ್ಬರವನ್ನು ಅನಲೋಡ್ ಮಾಡುತ್ತಿದ್ದಾಗ ಮಧ್ಯಾಹ್ನ 3.30 ಗಂಟೆ ಸುಮಾರಿಗೆ ಒಂದನೇ ಆರೋಪಿಯು ಲಾರಿ ನಂಬರ ಸಿಎನ್‌ಪಿ-3047 ಅನ್ನು ಅತೀ ವೇಗವಾಗಿ ನಿರ್ಲಕ್ಷತನದಿಂದ ಹಿಮ್ಮುಖವಾಗಿ ಚಲಾನೆ ಮಾಡಿದನು ಎಂದರೆ ನನಗೆ ಗೊತ್ತಿಲ್ಲ. ಆ ಸಮಯಕ್ಕೆ ಗೊಬ್ಬರ ಅನಲೋಡ್ ಮಾಡಲು ಲಾರಿಯ ಹಿಂಭಾಗಕ್ಕೆ ನಿಂತಿದ್ದ ನನ್ನ ಗಂಡನಿಗೆ ಹಾಯಿಸಿ ಗಾಯ ಉಂಟು ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಚಾಸಾ-2 ರವರಿಂದ ಮಾಹಿತಿ ಪಡೆದುಕೊಂಡು ನಿಪಿ.1 ರಂತೆ ಪಿರ್ಯಾದಿಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಎರಡನೇ ಆರೋಪಿಯಿಂದ ಪರಿಹಾರ ಧನವನ್ನು ಪಡೆದುಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆ :** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ***

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***